ತಂದಿದ್ದ ಒಂದು ದೊಡ್ಡ ಮೊತ್ತದ ಚೆಕ್ ಭದ್ರವಾಗಿ ಕುಳಿತಿತ್ತು. ಅದನ್ನು ಎಮಿಲಿಗೆ ಕೊಟ್ಟು ಕ್ಷಮಾಪಣೆ ಕೇಳಿ ತನ್ನ ಭವಿಷ್ಯವನ್ನು ಕಾಯ್ದುಕೊಳ್ಳುವ ಪ್ರಯತ್ನಕ್ಕೆ ಮುಂದಾಗಿದ್ದ.

ಅವನು ಕಾಯುತ್ತಿದ್ದ ಎಮಿಲಿ ಬಂದೇಬಿಟ್ಟಳು. ಪ್ರತಿದಿನ ಕಾಣುತ್ತಿದ್ದ ಅವಳ ದುಂಡಗಿನ ಎದೆ ಇವತ್ತು ವಿಶ್ವನ ಕಣ್ಣಿಗೆ ಬೀಳಲೇ ಇಲ್ಲ. ಬದಲು ನಾಲಿಗೆ ಒಣಗಿತು.

"ಗುಡ್ ಮಾರ್ನಿಂಗ್" ಎಂದ.

"ಮಾರ್ನಿಂಗ್'' ಎಂದವಳು ಕಣ್ಣು ಕೂಡಿಸಲಿಲ್ಲ. ಇವನ ಎದೆ ಧಸಕ್ಕೆಂದಿತು.

ಹತ್ತಿರಕ್ಕೆ ಹೋದವನು, "ಸ್ವಲ್ಪ ಈ ಕಡೆ ಬರ್ತೀಯಾ, ಮಾತಾಡಬೇಕು" ಅಂದ. ಅವನ ಮುಖದಲ್ಲಿ ಕಳೆಯಿರಲಿಲ್ಲ. "ಓಕೇ" ಎಂದು ರಾಗವಾಗಿ ಅಂದವಳು ಅವನ ಹಿಂದೆ ಹೋದಳು. ಅವನು ರೆಕಾರ್ಡ್ಸ್‌ಗಳನ್ನು ಇಡುತ್ತಿದ್ದ ಕೋಣೆಗೆ ನಡೆದು ಹೋದ. ಅವಳು ಹಿಂಬಾಲಿಸಿದಳು.

ವಿಶ್ವ ಮೆಲುದನಿಯಲ್ಲಿ,

"ಎಮಿಲಿ, ಐ ಯಮ್ ರಿಯಲಿ ರಿಯಲಿ ಸಾರಿ, ಮೊನ್ನೆ ನಿನ್ನೊಡನೆ ನಾನು ಕೆಟ್ಟದಾಗಿ ನಡೆದುಕೊಳ್ಳಬಾರದಿತ್ತು'' ಅಂತ ದೀನವಾಗಿ ಹೇಳಿದ.

"ವಾಟ್ ಹ್ಯಾಪ್ಪನ್ಡ್? ಡೋಂಟ್ ಬಿ ಸಿಲ್ಲಿ'' ಎಂದಳು ಎಮಿಲಿ. ಅವಳ ಮುಖದ ತುಂಬ ಪ್ರಶ್ನೆ ಬರೆದಿತ್ತು.

"ಸೋ ಯು ಡೋಂಟ್ ರಿಮೆಂಬರ್?'' ಅಂತ ಆಶ್ಚರ್ಯದ ದನಿಯಲ್ಲಿ ಕೇಳಿದ ವಿಶ್ವ.

"ವಾಟ್ ಶುಡ್ ಐ ರಿಮೆಂಬರ್?" ಅಂತ ಪ್ರತಿ ಪ್ರಶ್ನೆ ಬಂತು.

"ಇನ್ ದಿ ಪಾರ್ಟಿ... ನೋ... ನಥಿಂಗ್ ರಿಯಲಿ, ಸಾರಿ ಟು ಬಾದರ್ ಯು ದಿಸ್ ಮಾರ್ನಿಂಗ್'' ಅಂತ ಸ್ವಲ್ಪ ಗೆಲುವಾದ ವಿಶ್ವ ಅವಳೆಡೆ ಆಶ್ಚರ್ಯದಿಂದ ನೋಡಿದ.

"ಸ್ಟ್ರೇಂಜ್... ಹೋಪ್ ಯು ಆರ್ ಓಕೆ?" ಅಂತ ಮುಖ ಕೊಂಕಿಸಿದ ಎಮಿಲಿ, "ಹ್ಯಾವ್ ಎ ಗುಡ್ ಡೇ'' ಅಂತ ಆಶ್ಚರ್ಯದಿಂದ ಹೇಳಿ ಹೊರಟು ಹೋದಳು.

ಅವಳಿಗೆ ಯಾವ ನೆನಪೂ ಇರಲಿಲ್ಲ! ತಾನು ಹೋದ ನಂತರವೂ ಅದೆಷ್ಟು ಕುಡಿದಿದ್ದಳೋ.

"ಶ್ಯೂರ್... ಸೇಮ್ ಟು ಯು'' ಎಂದ ವಿಶ್ವನ ಧ್ವನಿ ಗೆಲುವಾಗಿತ್ತು. ಬೆರಳುಗಳು ಐದಾದರೂ ಎಲ್ಲವೂ ಸಮವಲ್ಲ ಎನ್ನುವ ಸಿದ್ಧಾಂತ ಅವನಲ್ಲಿ ಹಾದು ಹೋಯಿತು. ಜೊತೆಗೆ ಅದೃಷ್ಟಗಳೂ!!

ಅವನ ಐದೂ ಬೆರಳುಗಳು ದೊಡ್ಡ ಮೊತ್ತದ ಚೆಕ್ಕಿದ್ದ ಅವನ ಜೇಬನ್ನು ಭದ್ರವಾಗಿ ಹಿಡಿದುಕೊಂಡವು.

### ಪ್ರೇಮಲತ ಬಿ.

ವೃತ್ತಿಯಲ್ಲಿ ದಂತವೈದ್ಯೆ. ಕಳೆದ 19 ವರ್ಷಗಳಿಂದ ಇಂಗ್ಲೆಂಡಿನಲ್ಲಿ ವಾಸ. ಮೂಲತಃ ತುಮಕೂರಿನವರು. ದಿನಪತ್ರಿಕೆ, ವಾರಪತ್ರಿಕೆ ಮತ್ತು ಅಂತರ್ಜಾಲ ತಾಣಗಳಲ್ಲಿ ಲೇಖನ ಮತ್ತು ಕವನಗಳು ಪ್ರಕಟವಾಗಿವೆ. 'ಪ್ರಜಾವಾಣಿ' ಪ್ರೇಮಪತ್ರ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, 'ಸುಧಾ' ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದಾರೆ. ಅವರ 'ಬಾಯೆಂಬ ಬ್ರಹ್ಮಾಂಡ' ಎನ್ನುವ ವೃತ್ತಿಪರ ಕಿರು ಪುಸ್ತಕವನ್ನು ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದೆ.